ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ - 583 105
VIJAYANAGARA SRI KRISHNADEVARAYA UNIVERSITY
"Jnana Sagara" Campus, Vinayaka Nagara, Cantonment, Ballari - 583 105
ಕುಲಸಚಿವರು
08392-242703
08392-242097

ಸಂಖ್ಯೆ: ವಿಶ್ರೀಕೃವಿಬ/ವಿ.ಮಂ.ವಿ/ಪಿಹೆಚ್.ಡಿ/2025-26/ 615 ದಿನಾಂಕ: 07/07/2025

## ಪಿಹೆಚ್.ಡಿ ಪ್ರವೇಶಾತಿ ಅಧಿಸೂಚನೆ

**ವಿಷಯ:** 2024-25 ನೇ ಶೈಕ್ಷಣಿಕ ಸಾಲಿನ ಪಿಹೆಚ್.ಡಿ ಪದವಿಯ ಪ್ರವೇಶಾತಿ ಅಧಿಸೂಚನೆ.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ. 16.04.2025

***

ಪಿಹೆಚ್.ಡಿ ಪದವಿಗೆ (ಪೂರ್ಣಕಾಲಿಕ ಮತ್ತು ಅರೆಕಾಲಿಕ) 2024-25 ನೇ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ವಿಷಯಗಳಲ್ಲಿ ಅರ್ಹ ಅಭ್ಯರ್ಥಿಗಳಿಂದ ಪ್ರವೇಶಾತಿ ಅರ್ಜಿ ಆಹ್ವಾನಿಸಲಾಗಿದೆ.

ಪಿಹೆಚ್.ಡಿ ಪದವಿಗಾಗಿ ಲಭ್ಯವಿರುವ ವಿಷಯಗಳು: ಗಣಿತಶಾಸ್ತ್ರ, ಸಸ್ಯಶಾಸ್ತ್ರ, ಭೌತಶಾಸ್ತ್ರ, ಅರ್ಥಶಾಸ್ತ್ರ, ರಸಾಯನಶಾಸ್ತ್ರ, ಔದ್ಯೋಗಿಕ ರಸಾಯನಶಾಸ್ತ್ರ, ವಾಣಿಜ್ಯಶಾಸ್ತ್ರ, ನಿರ್ವಹಣಾಶಾಸ್ತ್ರ, ಶಿಕ್ಷಣ, ಸಮಾಜಕಾರ್ಯ, ಪ್ರಾಣಿಶಾಸ್ತ್ರ, ಅನ್ವಯಿಕ ಭೂ ವಿಜ್ಞಾನ, ಇಂಗ್ಲೀಷ್, ಖನಿಜ ಸಂಸ್ಕರಣ, ಮಹಿಳಾ ಅಧ್ಯಯನ, ಜೈವಿಕ ತಂತ್ರಜ್ಞಾನ, ಸಮಾಜಶಾಸ್ತ್ರ, ಸೂಕ್ಷ್ಮ ಜೀವಶಾಸ್ತ್ರ, ಕಾನೂನು, ಗಣಕ ವಿಜ್ಞಾನ ಮತ್ತು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ

ಅಭ್ಯರ್ಥಿಯು ಪ್ರವೇಶಾತಿಯ ಅರ್ಜಿಯನ್ನು ವಿಶ್ವವಿದ್ಯಾಲಯದ ಜಾಲತಾಣ www.vskub.ac.in ನಿಂದ ಪಡೆದು ಭರ್ತಿ ಮಾಡಿ ಸಲ್ಲಿಸತಕ್ಕದ್ದು. ಅರ್ಜಿ ಶುಲ್ಕ ರೂ. 1,000/- ಸಾಮಾನ್ಯ ಮತ್ತು ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗಾಗಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1 ರ ಅಭ್ಯರ್ಥಿಗಳಿಗೆ ರೂ. 500/- ಗಳನ್ನು ಪಾವತಿಸಿದ ರಶೀದಿಯ ಹಾಗೂ ಅರ್ಜಿಯ ಪ್ರತಿಯನ್ನು ಆಯಾ ವಿಭಾಗದ ಮುಖ್ಯಸ್ಥರು/ಸಂಯೋಜಕರಿಗೆ ಸಲ್ಲಿಸತಕ್ಕದ್ದು. ಕೊನೆಯ ದಿನಾಂಕದ ನಂತರ ಅರ್ಜಿ ಸಲ್ಲಿಸುವವರು ಅರ್ಜಿ ಶುಲ್ಕದೊಂದಿಗೆ ದಂಡ ಶುಲ್ಕ ಸಹಿತ ರೂ. 500/- ನ್ನು ಪಾವತಿಸಿ ದಿನಾಂಕ 20.08.2025 ರೊಳಗಾಗಿ ಸಲ್ಲಿಸತಕ್ಕದ್ದು.

**ನೆನಪಿಡಬೇಕಾದ ದಿನಾಂಕ**

| ವಿವರ | ದಿನಾಂಕ |
|---|---|
| ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ | 07.08.2025 |
| ದಂಡ ಸಹಿತ ಕೊನೆಯ ದಿನಾಂಕ | 14.08.2025 |

ಅಪೂರ್ಣ ಅರ್ಜಿಗಳನ್ನು ಮತ್ತು ಸೂಕ್ತ ದಾಖಲಾತಿಗಳನ್ನು ಸಲ್ಲಿಸದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸುವುದು.

**ಅರ್ಹತೆ:**

- ನಾಲ್ಕು ವರ್ಷ/ಎಂಟು ಸೆಮಿಸ್ಟರ್‌ಗಳ ಸ್ನಾತಕ ಪದವಿ ನಂತರ ಒಂದು ವರ್ಷ/ಎರಡು ಸೆಮಿಸ್ಟರ್‌ಗಳ ಸ್ನಾತಕೋತ್ತರ ಪದವಿ ಪಡೆದ ಅಥವಾ ಮೂರು ವರ್ಷ/ಆರು ಸೆಮಿಸ್ಟರ್‌ಗಳ ಸ್ನಾತಕ ಪದವಿಯ ನಂತರ ಎರಡು ವರ್ಷ/ನಾಲ್ಕು ಸೆಮಿಸ್ಟರ್‌ಗಳ ಸ್ನಾತಕೋತ್ತರ ಪದವಿಯನ್ನು ಶೇ. 55% ಅಂಕಗಳೊಂದಿಗೆ ತೇರ್ಗಡೆಯಾಗಿರಬೇಕು.
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗ (non-creamy layer)/ವಿಭಿನ್ನ ಸಾಮರ್ಥ್ಯವುಳ್ಳ (Differently-Abled)/ಆರ್ಥಿಕವಾಗಿ ದುರ್ಬಲ ಹೊಂದಿದ ವರ್ಗದ ಅಭ್ಯರ್ಥಿಗಳಿಗೆ (Economically Weaker Section (EWS) ಶೇ. 5% (ಶೇ. 50%) ವಿನಾಯಿತಿ ಇರುತ್ತದೆ.

- ನಾಲ್ಕು ವರ್ಷ/ಎಂಟು ಸೆಮಿಸ್ಟರ್‌ಗಳ ಸ್ನಾತಕ ಪದವಿ ನಂತರ ಪ್ರವೇಶ ಪಡೆಯುವ ಅಭ್ಯರ್ಥಿಗಳು ಸ್ನಾತಕ ಪದವಿಯಲ್ಲಿ ಶೇ. 75% ಅಂಕಗಳನ್ನು ಪಡೆದಿರಬೇಕು ಅಥವಾ ಅದಕ್ಕೆ ಸಮಾನವಾಗಿ ಅನ್ವಯವಾಗುವ ಗ್ರೇಡ್‌ನ್ನು ಪಡೆದಿರಬೇಕು.
- ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಿಂದ ಸ್ನಾತಕೋತ್ತರ ಪದವಿ ಪಡೆದ ಯಾವುದೇ ಅಭ್ಯರ್ಥಿ/ ವಿದೇಶಿ ಪ್ರಜೆಗಳನ್ನೊಳಗೊಂಡಂತೆ (ಅವರ ರಾಯಭಾರ ಕಛೇರಿಗಳಿಂದ ಪ್ರಾಯೋಜಿತ (Sponsored by their Embassies)) ಶೇ. 55% ಅಂಕಗಳನ್ನು ಪಡೆದಿರಬೇಕು.
- ಮಾನ್ಯತೆ ಪಡೆದ ಸಂಸ್ಥೆ/ವಿದೇಶಿ ಸಂಸ್ಥೆಯಿಂದ ಎಂ.ಫಿಲ್ ನ್ನು ಶೇ. 55% ಅಂಕಗಳೊಂದಿಗೆ ಅಥವಾ ಅದಕ್ಕೆ ಸಮಾನವಾದ ಸಂಬಂಧಪಟ್ಟ ಸಂಸ್ಥೆಯಿಂದ ಗ್ರೇಡ್‌ನ್ನು ಪಡೆದು ತೇರ್ಗಡೆ ಹೊಂದಿರಬೇಕು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗ(non-creamy layer)/ವಿಭಿನ್ನ ಸಾಮರ್ಥ್ಯವುಳ್ಳ (Differently-Abled)/ಆರ್ಥಿಕವಾಗಿ ದುರ್ಬಲ ಹೊಂದಿದ ವರ್ಗದ ಅಭ್ಯರ್ಥಿಗಳಿಗೆ (Economically Weaker Section (EWS))ಶೇ. 5% (ಶೇ. 50%) ವಿನಾಯಿತಿ ಇರುತ್ತದೆ.

G P Dinesh 7/7/2025
ಕುಲಸಚಿವರು

**ಸಾಮಾನ್ಯ ಸೂಚನೆಗಳು:**

1. ಅರ್ಜಿಯ ಪ್ರತಿಯನ್ನು ಸಂಬಂಧಿಸಿದ ವಿಭಾಗಗಳಿಗೆ ಸಲ್ಲಿಸಲು ಕೊನೆಯ ದಿನಾಂಕ. 20.08.2025. ಮುಂದುವರೆದು, ಸಾರ್ವತ್ರಿಕ ರಜೆ ಹಾಗೂ ಎರಡನೇ/ನಾಲ್ಕನೇ ಶನಿವಾರ ಮತ್ತು ಭಾನುವಾರಗಳಂದು ಹೊರತುಪಡಿಸಿ ಸ್ವೀಕರಿಸಲಾಗುವುದು. ಅಂಚೆ ಮೂಲಕ ರವಾನೆ ಮಾಡಲಾದ ಅರ್ಜಿಯ ಲಕೋಟೆಯ ಪ್ರತಿಯು ಅಂಚೆ ವಿನಿಮಯದಲ್ಲಿ ವಿಳಂಬವಾದಲ್ಲಿ ವಿಶ್ವವಿದ್ಯಾಲಯವು ಜವಾಬ್ದಾರಿಯಾಗಿರುವುದಿಲ್ಲ.
2. ನಿಗದಿಪಡಿಸಿದ ಅರ್ಜಿ ಶುಲ್ಕವನ್ನು ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳ ಖಾತೆ ಸಂಖ್ಯೆ. 3866101000001 (IFSC Code: CNRB0003866) ಗೆ ಭರಿಸತಕ್ಕದ್ದು.
3. ಡಿ.ಡಿ ಯನ್ನು **"ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ"** ಇವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು.
4. ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ದೃಢೀಕರಿಸಿ ಸಲ್ಲಿಸತಕ್ಕದ್ದು.
5. ಮೀಸಲಾತಿ ಬಯಸುವ ಅಭ್ಯರ್ಥಿಗಳು ಸಂಬಂಧಿಸಿದ ಜಾತಿ/ಆದಾಯ ಪ್ರಮಾಣ/371(ಜೆ) ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. ಇಲ್ಲವಾದ್ದಲ್ಲಿ ಅಭ್ಯರ್ಥಿಗಳನ್ನು ಸಾಮಾನ್ಯ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು.
6. ಸರ್ಕಾರಿ ಸೇವೆಯಲ್ಲಿ ಇದ್ದಂತಹ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರದ ಮುಖಾಂತರ ಸಲ್ಲಿಸತಕ್ಕದ್ದು.
7. ಪ್ರವೇಶ ಪತ್ರವನ್ನು ಸಂಬಂಧಪಟ್ಟ ವಿಭಾಗದಿಂದ ಖುದ್ದಾಗಿ ಪಡೆಯತಕ್ಕದ್ದು.
8. ಪೂರ್ಣಕಾಲಿಕ ಪಿಹೆಚ್.ಡಿ ಬಯಸುವ ಅಭ್ಯರ್ಥಿಗಳು ಪಿಹೆಚ್.ಡಿ ಅವಧಿಯಲ್ಲಿ ಯಾವುದೇ ಹುದ್ದೆಗೆ ಸೇರುವುದಿಲ್ಲವೆಂದು ಮುಚ್ಚಳಿಕೆ ಪತ್ರವನ್ನು ಸಲ್ಲಿಸತಕ್ಕದ್ದು.
9. ಅರೆಕಾಲಿಕವಾಗಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ತಮ್ಮ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
10. ವಿಶ್ವವಿದ್ಯಾಲಯವು ಸೀಟುಗಳನ್ನು ಭರ್ತಿ ಮಾಡುವ ಹಾಗೂ ಮಾಡದೇ ಇರುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

**ಸೂಚನೆ:**

1. ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಸಂದರ್ಭದಲ್ಲಿ ಅಭ್ಯರ್ಥಿಗಳಿಗೆ ಸಮಾನ ಅಂಕಗಳು ಬಂದ ಪಕ್ಷದಲ್ಲಿ ಸ್ನಾತಕೋತ್ತರ ಪದವಿಯ ಅಂಕಗಳನ್ನು ಪರಿಗಣಿಸಲಾಗುವುದು.
2. UGC-NET (including JRF)/UGC-CSIR NET (including JRF)/National Level Funded Projects with fellowships and Indian Council for Cultural Relations (ICCR)/DST Inspire Fellowship/GATE/SLET/KSET/teacher fellowship holder., **ತೇರ್ಗಡೆಯಾದ ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ.**
3. ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ಪಡೆದ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಸಂದರ್ಶನದ ದಿನ, ಸಮಯ ಹಾಗೂ ಸ್ಥಳವನ್ನು ತಿಳಿಸಲಾಗುವುದು. ಇದನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಹ ಪ್ರಕಟಿಸಲಾಗುವುದು.

4. ಪ್ರವೇಶ ಪರೀಕ್ಷೆಯಲ್ಲಿ ಮತ್ತು ಸಂದರ್ಶನದಲ್ಲಿ ಅರ್ಹರಾದ ಅಭ್ಯರ್ಥಿಗಳು ಮಾತ್ರ ವಿಶ್ವವಿದ್ಯಾಲಯದ ಸಂಶೋಧನಾರ್ಥಿಯಾಗಿ ಪ್ರವೇಶ ಪಡೆಯಲು ಅರ್ಹರಾಗುತ್ತಾರೆ.
5. ಕಲ್ಯಾಣ ಕರ್ನಾಟಕಕ್ಕೆ (KK) ಮೀಸಲಿರುವ ಸ್ಥಾನದಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿರದ ಪಕ್ಷದಲ್ಲಿ ಅರ್ಹ ಕಲ್ಯಾಣ ಕರ್ನಾಟಕೇತರ ಅಭ್ಯರ್ಥಿಗಳಿಗೆ (NKK) ಹಂಚಿಕೆ ಮಾಡಲಾಗುವುದು.
6. ಪಿಹೆಚ್.ಡಿ ಸಂಶೋಧನಾರ್ಥಿಯಾಗಿ ಪ್ರವೇಶ ಪಡೆಯಲು ಅಗತ್ಯವಿರುವ ಮಾಹಿತಿಗಾಗಿ ವೆಬ್‌ಸೈಟ್‌ನಲ್ಲಿರುವ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಪಿಹೆಚ್.ಡಿ ಪರಿನಿಯಮಾವಳಿಯನ್ನು ಗಮನಿಸುವುದು.